ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – 570 006
ಅಧ್ಯಯನ ಸಾಮಗ್ರಿ ವಿಭಾಗ

ಸಂಖ್ಯೆ: ಕರಾಮುವಿ/ಅಸಾವಿ/08-69/2025-26 ದಿನಾಂಕ: 05.03.2026

# ದರಪಟ್ಟಿ ಆಹ್ವಾನ

ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ವರದಿಯನ್ನು ಪ್ರಿಂಟ್ ಹಾಗೂ ಬೈಂಡಿಂಗ್ ಮಾಡಿ ಸರಬರಾಜು ಮಾಡುವ ಸಂಬಂಧ ದರಪಟ್ಟಿಯನ್ನು ಆಹ್ವಾನಿಸಿರುವ ಬಗೆಗೆ.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 05.03.2026 (ಕಂಡಿಕೆ ಸಂಖ್ಯೆ: 06).

*******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ವರದಿಯನ್ನು 200 ಪ್ರತಿಗಳಂತೆ (ಅಂದಾಜು 30 ಪುಟಗಳು) ಡಿಜಿಟಲ್ ಪ್ರಿಂಟ್ ಹಾಗೂ ಬೈಂಡಿಂಗ್ ಮಾಡಿ ಸರಬರಾಜು ಮಾಡಿಕೊಳ್ಳಬೇಕಾಗಿದ್ದು, ಇದಕ್ಕೆ ಸಂಬಂಧಿಸಿದಂತೆ, Specifications ನಿಯಮ ಮತ್ತು ಷರತ್ತುಗಳು ಈ ಕೆಳಕಂಡಂತಿವೆ:

**Specifications:**

- ಒಳಪುಟಗಳನ್ನು ಡೆಮಿ 1/4 ಅಳತೆಯಲ್ಲಿ 70 GSM Maplitho White Paper ಉಪಯೋಗಿಸಿ, ಒಂದು ಬಣ್ಣದಲ್ಲಿ ಡಿಜಿಟಲ್ ಪ್ರಿಂಟಿಂಗ್ ಮಾಡಬೇಕಿರುತ್ತದೆ.
- ರಕ್ಷಾಪುಟಗಳನ್ನು 220 GSM ಬಳಸಿ Mat Lamination ನೊಂದಿಗೆ (ಬಹುವರ್ಣದಲ್ಲಿ) Centre Pin Binding ಮಾಡಬೇಕಾಗಿರುತ್ತದೆ.

ಸದರಿ ವರದಿಯನ್ನು ಈ ಮೇಲ್ಕಂಡ Specifications ನಂತೆ ಡಿಜಿಟಲ್ ಪ್ರಿಂಟ್ ಮತ್ತು ಬೈಂಡಿಂಗ್ ಮಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸ್ವಂತ ಖರ್ಚಿನಲ್ಲಿ ಸರಬರಾಜು ಮಾಡಲು ತಗಲುವ ಕನಿಷ್ಠತಮ ದರವನ್ನು (ಎಲ್ಲಾ ತೆರಿಗೆಸೇರಿದಂತೆ) ನಮೂದಿಸಿ 'ದರಪಟ್ಟಿ' ಸಲ್ಲಿಸಲು ಸೂಚಿಸಲಾಗಿದೆ.

| ಕ್ರಮ ಸಂಖ್ಯೆ | ವಿಷಯ | ತಗಲುವ ದರ ರೂ. ಗಳಲ್ಲಿ (ಎಲ್ಲಾ ತೆರಿಗೆಗಳೂ ಒಳಗೊಂಡಂತೆ) |
|---|---|---|
| 1 | ಒಳಪುಟಗಳ ಡಿಜಿಟಲ್ ಪ್ರಿಂಟಿಂಗ್ (ಒಂದು ಬಣ್ಣದಲ್ಲಿ) ಮುದ್ರಿಸಲು ಒಂದು ಪುಟಕ್ಕೆ ತಗಲುವ ದರ. | |
| 2 | ನಾಲ್ಕು (04) ಪುಟಗಳ ಒಂದು ರಕ್ಷಾ ಪುಟಕ್ಕೆ ಬಹುವರ್ಣದಲ್ಲಿ ಮುದ್ರಿಸಲು ಮತ್ತು ಬೈಂಡಿಂಗ್ ಮಾಡಲು ತಗಲುವ ದರ. | |

ಮೇಲ್ಕಂಡ ಮಾದರಿಯಲ್ಲಿ ತಮ್ಮ ಸಂಸ್ಥೆಯ ಮುಖಪತ್ರದಲ್ಲಿ (ಲೆಟರ್‌ಹೆಡ್) ದರವನ್ನು ನಮೂದಿಸಿ (ಎಲ್ಲಾ ತೆರಿಗೆಗಳೂ ಒಳಗೊಂಡಂತೆ), ಮೊಹರು ಮಾಡಿದ ಲಕೋಟೆಯ ಮೇಲೆ **"2024-25ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ವರದಿಯನ್ನು ಡಿಜಿಟಲ್ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಮಾಡುವ ಸಂಬಂಧದ ದರಪಟ್ಟಿ"** ಎಂಬುದಾಗಿ ಶೀರ್ಷಿಕೆಯನ್ನು ಕಡ್ಡಾಯವಾಗಿ ಬರೆದು, ದಿನಾಂಕ: 23-03-2026 ರ ಸಂಜೆ 5.00 ಗಂಟೆಯ ಒಳಗಾಗಿ, ದರಪಟ್ಟಿಯನ್ನು **"ಕುಲಸಚಿವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮುಕ್ತಗಂಗೋತ್ರಿ, ಮೈಸೂರು"** ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ತಲುಪಿಸಲು ತಿಳಿಸಿದೆ (ಅಂಚೆ ವಿಳಂಬಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗುವುದಿಲ್ಲ).

ಷರತ್ತುಗಳು:

1. ಮುದ್ರಣಕ್ಕೆ ಸಂಬಂಧಿಸಿದಂತೆ ವರದಿಯ ಕರಡು (ಡೆಮಿ) ಮತ್ತು ಸಾಫ್ಟ್ ಕಾಪಿಯನ್ನು ವಿಶ್ವವಿದ್ಯಾನಿಲಯವೇ ಕಾರ್ಯಾದೇಶದೊಂದಿಗೆ ನೀಡುತ್ತದೆ. ಯಾವುದೇ ಬದಲಾವಣೆ ಇಲ್ಲದಂತೆ ಅಚ್ಚುಕಟ್ಟಾಗಿ ಡಿಜಿಟಲ್ ಪ್ರಿಂಟಿಂಗ್ ಹಾಗೂ ಬೈಂಡಿಂಗ್ ಮಾಡಿ ಸರಬರಾಜು ಮಾಡಬೇಕಾಗಿರುತ್ತದೆ (ಅಂತಿಮ ಮುದ್ರಣಕ್ಕೆ ಮುಂಚೆ ಒಂದು ಪ್ರತಿಯ ಡೆಮಿಯನ್ನು ನೀಡಿ ಸಂಬಂಧಪಟ್ಟ ವಿಭಾಗದಿಂದ ಅನುಮೋದನೆ ಪಡೆದು ಮುದ್ರಣಕ್ಕೆ ಕ್ರಮವಹಿಸುವುದು ಕಡ್ಡಾಯವಾಗಿರುತ್ತದೆ).
2. ವರದಿಯ ಡಿಜಿಟಲ್ ಮುದ್ರಣಕ್ಕೆ ನಿಗದಿಪಡಿಸುವ ದರಗಳು ಮತ್ತೊಮ್ಮೆ ದರಪಟ್ಟಿಯನ್ನು ಕರೆಯುವವರೆಗೆ ಚಾಲ್ತಿಯಲ್ಲಿರುತ್ತವೆ.
3. ಒಮ್ಮೆ ದರಪಟ್ಟಿಯನ್ನು ಸಲ್ಲಿಸಿ ಕನಿಷ್ಠತಮ ದರ ನಿಗಧಿಯಾದ ನಂತರ ಡಿಜಿಟಲ್ ಪ್ರಿಂಟ್ ಹಾಗೂ ಬೈಂಡಿಂಗ್ ಮಾಡಿ ಸರಬರಾಜು ಮಾಡಲು ಸಬೂಬು ನೀಡಿದರೆ ಕಾನೂನು ರೀತ್ಯಾ ಕ್ರಮಕೈಗೊಳ್ಳಲಾಗುತ್ತದೆ.
4. GST ನೋಂದಣಿದಾರರಿಗೆ ಮಾತ್ರ ವಿಶ್ವವಿದ್ಯಾನಿಲಯದಲ್ಲಿ ಮುದ್ರಣದ ಕೆಲಸ ನಿರ್ವಹಿಸಲು ಅವಕಾಶವಿರುವುದರಿಂದ GST ನೋಂದಣಿದಾರರು ಮಾತ್ರ ದರಪಟ್ಟಿಯನ್ನು ಸಲ್ಲಿಸುವುದು; ತಪ್ಪಿದ್ದಲ್ಲಿ ದರಪಟ್ಟಿಯನ್ನು ತಿರಸ್ಕರಿಸಲಾಗುವುದು.
5. ಸದರಿ ದರಪಟ್ಟಿಯನ್ನು ಅಂಗೀಕರಿಸುವ / ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಹೊಂದಿರುತ್ತದೆ.

ಆದೇಶದ ಮೇರೆಗೆ,

ಕುಲಸಚಿವ

ಪ್ರತಿ:

1. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಶಾಖೆ, ಕರಾಮುವಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
4. ಡಾ. ನವೀನ್‌ಕುಮಾರ್ ಸಿ.ಜಿ. ನೋಡೆಲ್ ಅಧಿಕಾರಿ, ವೆಬ್‌ಸೈಟ್, ಕರಾಮುವಿ, ಮೈಸೂರು.
   (ಸದರಿ ಪ್ರಕಟಣೆಯನ್ನು ವಿ.ವಿ. ನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು)
5. ಕಚೇರಿ ಪ್ರತಿ.